ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
Bruhat Bengaluru Mahanagara Palike

ಅಧೀಕ್ಷಕ ಅಭಿಯಂತರವರ ಕಛೇರಿ, ದಾಸರಹಳ್ಳಿ ವಲಯ,
ಎಂ.ಇ.ಐ.ಬಡಾವಣೆ, ಬಾಗಲಗುಂಟೆ, ಹೆಸರಘಟ್ಟ ಮುಖ್ಯರಸ್ತೆ, ಬೆಂಗಳೂರು -560073.

ಸಂಖ್ಯೆ: ಅ.ಅ.(ದಾ)/ತಾ.ಮ./63/2020-21 ದಿನಾಂಕ: 23/07/2020.

"ತಾಂತ್ರಿಕ ಮಂಜೂರಾತಿ ಪತ್ರ"

ವಿಷಯ :- Solid Waste Management in Ward no 15 Dasarahalli (CC Camera) ಕಾಮಗಾರಿಗೆ ತಾಂತ್ರಿಕ ಮಂಜೂರಾತಿ ನೀಡುವ ಬಗ್ಗೆ.

ಉಲ್ಲೇಖ :- **ಕಾರ್ಯಪಾಲಕ ಅಭಿಯಂತರರು** (ದಾಸರಹಳ್ಳಿ) ರವರ ಆಡಳಿತಾತ್ಮಕ ಮಂಜೂರಾತಿ **ಸಂಖ್ಯೆ:ಕಾ.ಪಾ.ಅ./ಆ.ಅ/102/2020-21**, ದಿನಾಂಕ: 17.07.2020.

ಪ್ರಸ್ತಾವನೆ:-

ಕಾರ್ಯಪಾಲಕ ಅಭಿಯಂತರರು (ದಾಸರಹಳ್ಳಿ) ರವರು ಮೇಲ್ಕಂಡ ಕಾಮಗಾರಿಯ ಅಂದಾಜು ಪಟ್ಟಿಯನ್ನು **ರೂ.30.00 ಲಕ್ಷಗಳ** ಮೊತ್ತಕ್ಕೆ ತಯಾರಿಸಿ, ಉಲ್ಲೇಖದಂತೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದ್ದು, ತಾಂತ್ರಿಕ ಮಂಜೂರಾತಿ ಕೋರಿ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಕಾರ್ಯಪಾಲಕ ಅಭಿಯಂತರರು (ದಾಸರಹಳ್ಳಿ) ರವರ ಪ್ರಸ್ತಾವನೆಯನ್ನು ಪರಿಗಣಿಸಿ ಈ ಕೆಳಕಂಡ ಆದೇಶ ಹೊರಡಿಸಲಾಗಿದೆ.

ಸದರಿ Solid Waste Management in Ward no 15 Dasarahalli (CC Camera)ರ ಕಾಮಗಾರಿಯ ಅಂದಾಜು ಮೊತ್ತ **ರೂ.30.00 ಲಕ್ಷಗಳ** ಮೊತ್ತಕ್ಕೆ 2019-20ನೇ ಸಾಲಿನ ಆಯವ್ಯಯ P-3726ರಲ್ಲಿ ಮೀಸಲಿಟ್ಟಿರುವ ಅನುದಾನದಡಿಯಲ್ಲಿ ಜಾಬ್ ಸಂಖ್ಯೆ 015-20-000085 ನೀಡಲಾಗಿರುತ್ತದೆ. ಸದರಿ ಅಂದಾಜು ಪಟ್ಟಿಗೆ ಈ ಕಛೇರಿಯ ತಾಂತ್ರಿಕ ಮಂಜೂರಾತಿ ದಾಖಲಾತಿಯ ವಹಿಯ **ಕ್ರಮ ಸಂಖ್ಯೆ.63**, ಮತ್ತು **ಪುಟ ಸಂಖ್ಯೆ:28**, ರಲ್ಲಿ ನೊಂದಾಯಿಸಿ **ರೂ.30.00 ಲಕ್ಷಗಳಿಗೆ** ಈ ಕೆಳಕಂಡ ಷರತ್ತುಗಳಿಗೆ ಒಳಪಡಿಸಿ ತಾಂತ್ರಿಕ ಮಂಜೂರಾತಿಯನ್ನು ನೀಡಲಾಗಿದೆ.

ಷರತ್ತುಗಳು :-

1. ಪ್ರಸ್ತಾಪಿತ ಅಂದಾಜು ಪಟ್ಟಿಯಲ್ಲಿ ಅಳವಡಿಸಿಕೊಂಡಿರುವ ವಿಶಿಷ್ಟ ವಿವರಣೆ / ವಿಶಿಷ್ಟತೆ ಸ್ಥಳಕ್ಕೆ ಅನುಗುಣವಾಗಿರುವುದರ ಮತ್ತೊಮ್ಮೆ ಧೃಢೀಕರಿಸಿಕೊಳ್ಳುವುದು.
2. ಅಂದಾಜು ಪಟ್ಟಿಯಲ್ಲಿ ಅಳವಡಿಸಿ ಕೊಳ್ಳಲಗಿರುವ ಅಂಶಗಳಿಗೆ ಪ್ರಸಕ್ತ ಸಾಲಿನ / ಇತರೆ ದರಪಟ್ಟಿಯಲ್ಲಿ ದರಗಳು ಲಭ್ಯವಿರುವ ಬಗ್ಗೆ ಮತ್ತೊಮ್ಮೆ ಪರಿಶೀಲಿಸಿಕೊಳ್ಳುವುದು.
3. ಈ ವಾರ್ಡಿನಲ್ಲಿ ಈ ಹಿಂದೆ ಇದೇ ಕಾಮಗಾರಿಯನ್ನು (ಸಿಸಿ ಟಿವಿ ಕ್ಯಾಮೆರಾ) ಅಳವಡಿಸಿದ್ದಲ್ಲಿ, ಸಮರ್ಪಕವಾಗಿ ಉಪಯುಕ್ತತೆ / ಕಾರ್ಯ ನಿರ್ವಹಿಸುತ್ತಿರುವ ಬಗ್ಗೆ ಪರಿಶೀಲಿಸಿಕೊಳ್ಳುವುದು ಹಾಗೂ ಅಳವಡಿಸಲಾಗಿರುವ ಸಿಸಿ ಕ್ಯಾಮೆರಾದ ಸ್ಥಳವನ್ನು ಪ್ರತ್ಯೇಕವಾದ ವಹಿಯಲ್ಲಿ ನಮೂದಿಸಿ ಧೃಢೀಕರಿಸಿ ಕೊಳ್ಳುವುದು.
4. ಅಂದಾಜು ಪಟ್ಟಿಯಲ್ಲಿ ಅಳವಡಿಸಿಕೊಳ್ಳಲಾಗಿರುವ Electronics Itemsಗಳು ಮಾರುಕಟ್ಟೆಯಲ್ಲಿ ಅನೇಕ ಮಾದರಿಯ ಅಂಶಗಳು ಲಭ್ಯವಿರುವುದರಿಂದ ಉತ್ತಮ ಗುಣಮಟ್ಟದ ಹಾಗೂ ಕಾರ್ಯಕ್ಷಮತೆಯುಳ್ಳ ಅಂಶಗಳನ್ನು ಆಯ್ಕೆ ಮಾಡಿ, ಎಲ್ಲಾ ಅಂಶಗಳನ್ನು ಅನುಷ್ಠಾನಗೊಳಿಸುವ ಮುನ್ನ ಕಾರ್ಯಪಾಲಕ ಅಭಿಯಂತರರು ರವರಿಂದ ಧೃಢೀಕರಣ ಪಡೆದ ನಂತರವೇ ಅನುಷ್ಠಾನಗೊಳಿಸುವ ಷರತ್ತಿಗೊಳಪಡಿಸಿದೆ.
5. ಸದರಿ ಅಂದಾಜುಪಟ್ಟಿಯಲ್ಲಿ ಅಳವಡಿಸಿಕೊಳ್ಳಲಾಗಿರುವ ಎಲ್ಲಾ ಅಂಶಗಳಿಗೆ ದರಪಟ್ಟಿಯಲ್ಲಿ ದರಗಳು ಲಭ್ಯವಿಲ್ಲದಿರುವುದರಿಂದ ಸರ್ಕಾರಿ ಅಂಗಸಂಸ್ಥೆಯಾದ Ms. KEONICS ಸಂಸ್ಥೆಯವರಿಂದ ಸದರಿ ಅಂಶಗಳಿಗೆ ಮೂಲ ದರ (Base Rate) ಅನ್ನು ಪಡೆದು ಅದರಂತೆ, ಅಂದಾಜು ಪಟ್ಟಿಯನ್ನು ಸಿದ್ಧಪಡಿಸಿಕೊಂಡಿರುವುದು ಕಂಡು ಬಂದಿದ್ದು, ಸದರಿ ದರಗಳು ಅಂದಾಜು ಪಟ್ಟಿ ತಯಾರಿಸಲು ಮಾತ್ರ ಸೀಮಿತಪಟ್ಟಿದ್ದು, ಇದರ ಅಂತಿಮ ದರಗಳನ್ನು ಟೆಂಡರ್ ನಲ್ಲಿ ನಮೂದಿಸಿರುವ / ನಿರ್ಣಹಿಸುವ ಕನಿಷ್ಠ ದರಗಳನ್ನು ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದು ಪರಿಗಣಿಸುವ ಷರತ್ತಿಗೊಳಪಡಿಸಿದೆ.

ಪು.ತಿ.ನೋ